ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ಹೊಸ ಸಾರ್ವಜನಿಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು ೦೧

ಸಂಖ್ಯೆ: ಸಿ3(4) ಇತರೆ ಡಿಎಡ್.ಬಿಎಡ್/63/05-06 ದಿನಾಂಕ:1ನೇ ಏಪ್ರಿಲ್ 2006

ಜ್ಞಾಪನ

ವಿಷಯ: ಡಿ.ಎಡ್., ಬಿ.ಎಡ್., ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮ ಕುರಿತು.

ಉಲ್ಲೇಖ: ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ 22ನೇ ಕಾರ್ಯಕ್ರಮ ಸಮಿತಿ ಸಭೆ ದಿನಾಂಕ: 28-3-2006.

# # # #

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ಸ್ವಯಂ ಸೇವಕರಾಗಿ ಒಬ್ಬರು ಇಬ್ಬರು ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವ ಪ್ರಾಜೆಕ್ಟ್ ವರ್ಕ್‌ಗಗಿ 9ನೇ ತರಗತಿಯ ವಿದ್ಯಾರ್ಥಿಗೆ 20 ಅಂಕಗಳನ್ನು ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗೆ 10 ಅಂಕಗಳನ್ನು ನೀಡುವ ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮವು 2005-06ನೇ ಸಾಲಿನಲ್ಲಿ ಯಶಸ್ವಿಯಾಗಿದೆ.

ಅದೇ ಮಾದರಿಯಲ್ಲಿ ಡಿ.ಎಡ್., ಮತ್ತು ಬಿ.ಎಡ್., ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮವನ್ನು ರಾಜ್ಯದಲ್ಲಿ 2006-07ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವುದು ಅಗತ್ಯವಾಗಿದೆ ಎಂಬ ವಿಷಯದ ಬಗ್ಗೆ ದಿನಾಂಕ: 28-03-2006 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಸಭೆಯು ಕೂಲಂಕುಷವಾಗಿ ಚರ್ಚಿಸಿ ವಯಸ್ಕರ ಶಿಕ್ಷಣ / ಸಾಕ್ಷರತೆ ವಿಷಯವು ಡಿ.ಎಡ್., ಮತ್ತು ಬಿ.ಎಡ್., ಪಠ್ಯಕ್ರಮದಲ್ಲಿ ಅಳವಡಿಕೆಯಾಗಿರುವುದರಿಂದ ಡಿ.ಎಡ್., ಮತ್ತು ಬಿ.ಎಡ್., ಪ್ರತಿಯೊಬ್ಬ ವಿದ್ಯಾರ್ಥಿ / ವಿದ್ಯಾರ್ಥಿನಿಯರು ಜಿಲ್ಲಾ ಸಾಕ್ಷರತಾ ಸಮಿತಿಯು ಗುರುತಿಸಿದ ಪಟ್ಟಿಯಲ್ಲಿರುವ ನೆರೆಹೊರೆಯ 05 ಜನ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವಂತೆ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ.

ಆದ ಪ್ರಯುಕ್ತ 2006-07ನೇ ಶೈಕ್ಷಣಿಕ ವರ್ಷದಲ್ಲಿ ಡಿ.ಎಡ್., ಮತ್ತು ಬಿ.ಎಡ್., ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ನೆರೆಹೊರೆಯ 15-35 ರ ವಯೋಮಿತಿಯ ಅನಕ್ಷರಸ್ಥರಿಗೆ ಕಡ್ಡಾಯವಾಗಿ 5-6 ತಿಂಗಳ ಅವಧಿಗೆ ಓದು ಬರಹ ಕಲಿಸಿ ಸಾಕ್ಷರಸ್ಥರನ್ನಾಗಿಸುವ ಪ್ರಾಜೆಕ್ಟ್ ವರ್ಕ್‌ನ್ನು ವಿದ್ಯಾರ್ಥಿಗಳಿಗೆ ವಹಿಸಿಕೊಡಲು ಡಿ.ಎಡ್. ಮತ್ತು ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರು ಕಾರ್ಯ ಯೋಜನೆಯನ್ನು ರೂಪಿಸಿ ಜಾರಿಗೆ ತರಲು ಈ ಮೂಲಕ ತಿಳಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರು ಇವರಿಗೆ ಸೂಕ್ತ ಕ್ರಮಕ್ಕಾಗಿ,
2. ಡಿ.ಎಡ್., ಕಾಲೇಜುಗಳ ಪ್ರಾಂಸುಪಾಲರು ಇವರಿಗೆ ಸೂಕ್ತ ಕ್ರಮಕ್ಕಾಗಿ,
3. ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ,
4. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ ಅವಗಾಹನೆಗಾಗಿ,
5. ಅಪರ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಇವರ ಅವಗಾಹನೆಗಾಗಿ,
6. ಸಹ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಇವರ ಆಪ್ತ ಸಹಾಯಕರಿಗೆ,
7. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಇವರಿಗೆ.